Compt/Uplok/BD/1167/2020

## ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಬಿಡಿ/1167/2020/ಎಆರ್‌ಎಲ್‌ಓ-5

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿ:23/11/2020

## *ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12 (3)ರ ಅನ್ವಯ ವರದಿ*

ವಿಷಯ: ಶ್ರೀ. ಪಿ.ಎಸ್.ಮಾರುತಿ ಶಂಕರ್, ಹಿಂದಿನ ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ವಿಜಯಪುರ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ಸಾರ್ವಜನಿಕ/ಸರ್ಕಾರಿ ನೌಕರರಾಗಿ ಎಸಗಿದ ದುರ್ವರ್ತನೆಯ ಕುರಿತು.

****

ಈ ಪ್ರಕರಣವು ಅಪರ ಪೋಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತರವರು ದಿನಾಂಕ: 24/04/2019ರಂದು ನೀಡಿದ ವರದಿಯ ಆಧಾರದ ಮೇಲೆ ದಾಖಲು ಮಾಡಿರುವ ಸ್ವಯಂ ಪ್ರೇರಿತ ದೂರಾಗಿರುತ್ತದೆ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಸದರಿ ವರದಿಯ ಮೇಲೆ ಶ್ರೀ. ಪಿ.ಎಸ್.ಮಾರುತಿ ಶಂಕರ್, ಹಿಂದಿನ ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ವಿಜಯಪುರ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ತನಿಖೆಗೆ ಕೈಗೆತ್ತಿಕೊಳ್ಳಲಾಗಿದೆ.

2. ವಿಜಯಪುರ ಪುರಸಭೆಯ ವ್ಯಾಪ್ತಿಯಲ್ಲಿ ಶ್ರೀ.ರಘು ಬಿನ್ ವಿ.ಚನ್ನಪ್ಪರವರು ದೇವನಹಳ್ಳಿ ತಾಲ್ಲೂಕು ಖಾತಾ ನಂಬರ್ 1927/868ರಲ್ಲಿ 19X10 ಅಡಿ ಕಟ್ಟಡವನ್ನು ನಿರ್ಮಿಸಲು ಲೈಸೆನ್ಸ್ ಹಾಗೂ ಪ್ಲಾನ್ ಪಡೆಯದೆ ಕಟ್ಟಡವನ್ನು ನಿರ್ಮಿಸಿದ್ದು, ಈ ಬಗ್ಗೆ ಅರ್ಜಿದಾರರು ಪುರಸಭೆಯಲ್ಲಿ ದೂರನ್ನು ನೀಡಿದ್ದರೂ ಸಹ ಎದುರುದಾರರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದು ಆಪಾದಿಸಿರುತ್ತಾರೆ.

3. ವಿಚಾರಣಾಧಿಕಾರಿಯು ತಮ್ಮ ವರದಿಯಲ್ಲಿ ದೂರು ಅರ್ಜಿಯಲ್ಲಿ ಮಾಡಲಾದ ಆಪಾದನೆಗಳ ಸಂಬಂಧ ವಿಚಾರಣೆ ನಡೆಸಿ ಅರ್ಜಿ ದಾಖಲಾದ ಸಮಯದಲ್ಲಿ ದಿನಾಂಕ: 22/12/2013ರಿಂದ ದಿನಾಂಕ: 21/07/2016ರವರೆಗೆ ಪುರಸಭೆಯ ಮುಖ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದ ಶ್ರೀ.ಪಿ.ಎಸ್.ಮಾರುತಿ ಶಂಕರ್‌ರವರು ತಮ್ಮ ಅಧಿಕಾರಾವಧಿಯಲ್ಲಿ ಅಕ್ರಮ ಕಟ್ಟಡದ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದಿರುವುದು ಕಂಡು ಬಂದಿರುತ್ತದೆ ಎಂದು ತಿಳಿಸಿರುತ್ತಾರೆ. ದಿನಾಂಕ: 22/12/2013 ರಿಂದ ದಿನಾಂಕ 21/07/2016ರವರೆಗೆ ಪುರಸಭೆಯ ಮುಖ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದ ಶ್ರೀ. ಪಿ.ಎಸ್.ಮಾರುತಿ ಶಂಕರ್‌ರವರು ಅಕ್ರಮ ಕಟ್ಟಡದ ಮಾಲೀಕರಿಗೆ 2 ನೋಟೀಸ್‌ಗಳನ್ನು ನೀಡಿದ ನಂತರ ಯಾವುದೇ ಕ್ರಮ ಜರುಗಿಸದೇ ಇದ್ದುದರಿಂದ ಕಟ್ಟಡದ ಮಾಲೀಕರಾದ ಶ್ರೀ. ರಘು ಎಂಬುವವರು ಅಕ್ರಮ ಕಟ್ಟಡವನ್ನು ನಿರ್ಮಿಸಲು ಅವಕಾಶವಾಗಿರುತ್ತದೆ ಆದುದರಿಂದ ಎದುರುದಾರರು ಕರ್ತವ್ಯ ನಿರ್ಲಕ್ಷ್ಯ ತೋರಿರುವುದು ಕಂಡು ಬಂದಿರುತ್ತದೆ ಎಂದು ತನಿಖಾ ವರದಿಯನ್ನು ಸಲ್ಲಿಸಿರುತ್ತಾರೆ.

4. ಸದರಿ ತನಿಖಾ ವರದಿಯ ಮೇರೆಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೋರಲಾಗಿದ್ದು, ಎದುರುದಾರರು ದಿ. 10/09/2020ರ ಆಕ್ಷೇಪಣೆಯನ್ನು

ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಯಲ್ಲಿ, ಎದುರುದಾರರ ವಿರುದ್ದ ಇರುವ ಆಪಾದನೆಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು, ದಿ. 17/07/2015 ರಂದು ಶ್ರೀ. ರಘು ಬಿನ್ ವಿ. ಚೆನ್ನಪ್ಪರವರು ಅವರ ಹೆಸರಿನಲ್ಲಿರುವ ಖಾತೆ ಸಂಖ್ಯೆ ನಂ. 480/203/354 ವಿಸ್ತೀರ್ಣ 19X43X32/2 ಮತ್ತು ಅವರ ತಾಯಿಯ ಹೆಸರಿನಲ್ಲಿರುವ ಖಾತೆ ಸಂಖ್ಯೆ ನಂ. 481/01/204/354/01 ವಿಸ್ತೀರ್ಣ 20X21 ನಿವೇಶನಗಳಲ್ಲಿ ಕಟ್ಟಡ ಕಟ್ಟುವ ಬಗ್ಗೆ ಸಕಾಲದಲ್ಲಿ ಕಟ್ಟಡ ನಿರ್ಮಾಣ ಪರವಾನಿಗೆ ಕೋರಿ ಮನವಿ ಸಲ್ಲಿಸಿರುತ್ತಾರೆ.

5. ದಿನಾಂಕ: 20/07/2015ರಂದು ಪುರಸಭೆಯ ಪ್ರಭಾರ ಕಂದಾಯ ನಿರೀಕ್ಷಕರಾದ ಶ್ರೀ. ಗೋವಿಂದರಾಜುರವರು ಶ್ರೀ. ರಘು ಬಿನ್ ವಿ. ಚೆನ್ನಪ್ಪರವರು ಕಟ್ಟಡ ಕಟ್ಟುವ ಬಗ್ಗೆ ಸಕಾಲದಲ್ಲಿ ಕಟ್ಟಡ ನಿರ್ಮಾಣ ಪರವಾನಿಗೆಗೆ ನೀಡಿರುವ ಬಗ್ಗೆ ಸ್ಥಳ ಪರಿಶೀಲನೆ ಮಾಡಿದ್ದು, ಆ ಸಮಯದಲ್ಲಿ ಶ್ರೀ. ರಘು ಬಿನ್ ವಿ. ಚೆನ್ನಪ್ಪರವರು ವಾಣಿಜ್ಯ ಕಟ್ಟಡ ನಿರ್ಮಾಣ ಮಾಡುತ್ತಿರುವುದು ಕಂಡು ಬಂದಿದ್ದು, ವಾಸ ಕಟ್ಟಡ ಕಟ್ಟುವ ಬಗ್ಗೆ ಸಕಾಲದಲ್ಲಿ ಕಟ್ಟಡ ನಿರ್ಮಾಣ ಪರವಾನಿಗೆ ಕೋರಿ ಸಲ್ಲಿಸಿರುವ ಅರ್ಜಿದಾರರಿಗೆ ಹಿಂಬರಹ ನೀಡಲು ವರದಿಯ ನೋಟ್ ಶೀಟ್‌ನಲ್ಲಿ ನಮೂದಿಸಿರುತ್ತಾರೆ ಹಾಗೂ ಮನವಿ ಸಲ್ಲಿಸಿರುತ್ತಾರೆ.

6. ದಿನಾಂಕ: 21/07/2015ರಂದು ಎದುರುದಾರರು ಶ್ರೀ. ರಘು ಬಿನ್ ವಿ. ಚೆನ್ನಪ್ಪರವರಿಗೆ ಎರಡನೇ ಬಾರಿ ನೀಡಿದ ನೋಟಿಸ್‌ನಲ್ಲಿ ಕೂಡಲೇ ಕಟ್ಟಡ ನಿರ್ಮಾಣ ಕೆಲಸ ನಿಲ್ಲಿಸಲು ಆದೇಶಿಸಿದ್ದು. ಈ ಬಗ್ಗೆ ದಿನಾಂಕ: 10/08/2015ರಂದು ಶ್ರೀ. ರಘು ಬಿನ್ ವಿ. ಚೆನ್ನಪ್ಪರವರು ಸಮಾಜಾಯಿಷಿಯನ್ನು ನೀಡಿದ್ದು, ಅದರಲ್ಲಿ ಕಾರಣಾಂತರದಿಂದ ವಾಣಿಜ್ಯ ಉಪಯೋಗಕ್ಕಾಗಿ ಕಟ್ಟಡ ಕಟ್ಟಲು ಮುಂದಾಗಿದ್ದು, ಈ

ಸಂಬಂಧ ಬ್ಯಾಂಕ್‌ನಲ್ಲಿ ಸಾಲ ಪಡೆಯಲು ಅರ್ಜಿ ಸಲ್ಲಿಸಿರುತ್ತೇನೆ ಹಾಗೂ ತಮ್ಮ ಕಾರ್ಯಾಲಯದ ಆದೇಶದಂತೆ ನಾನು ಕಟ್ಟಡ ನಿರ್ಮಾಣ ಕಾಮಗಾರಿ ಕೆಲಸ ನಿಲ್ಲಿಸಿರುತ್ತೇನೆ ಮತ್ತು ದಿನಾಂಕ 22/07/2015ರಂದ ನನ್ನ ಮೇಲೆ ಮತ್ತು ನನ್ನ ಕುಟುಂಬದ ಮೇಲೆ ಈ ಮೇಲೆ ತಿಳಿಸಿರುವ ಆಸ್ತಿಗಳು ತನ್ನದೆಂದು ಶ್ರೀ. ನಾಗರಾಜ್‌ರವರಿಂದ ದಿವಾಣಿ ಪ್ರಕರಣವನ್ನು ದೇವನಹಳ್ಳಿ ಸಿವಿಲ್ ನ್ಯಾಯಾಲಯದಲ್ಲಿ ದಾಖಲು ಮಾಡಿರುತ್ತಾರೆ ಅದು ಓ.ಎಸ್.ನಂ. 521/2015 ಆಗಿರುತ್ತದೆ. ಸದರಿ ದಾವೆಯು ಪ್ರಸ್ತುತ ವಿಚಾರಣಾ ಹಂತದಲ್ಲಿ ಇರುತ್ತದೆ. ಪ್ರಕರಣ ಸಿವಿಲ್ ನ್ಯಾಯಾಲದಲ್ಲಿ ದಾಖಲಾಗಿ, ಮಧ್ಯಂತರ/Stay ಆದೇಶ ಇರುವುದರಿಂದ ಯಾವುದೇ ಕ್ರಮ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ ಎಂದು ಎದುರುದಾರರು ತಿಳಿಸಿರುತ್ತಾರೆ.

7. ಆದರೆ ಎದುರುದಾರರು ಸದರಿ ಮಧ್ಯಂತರ ಆದೇಶದ ಪ್ರತಿಯನ್ನು ಹಾಜರು ಮಾಡದ ಕಾರಣ ಮಾನ್ಯ ಉಪಲೋಕಾಯುಕ್ತರವರ ದಿನಾಂಕ: 21/09/2020ರ ಆದೇಶದಂತೆ ಸದರಿ ಮೂಲ ದಾವಾ ಸಂಖ್ಯೆ: 521/2005ರಲ್ಲಿ ಆಗಿರುವ ಮಧ್ಯಂತರ ಆದೇಶದ ಪ್ರತಿಯನ್ನು ಸಲ್ಲಿಸಲು ಸೂಚಿಸಲಾಗಿದ್ದು, ಅದರಂತೆ ಎದುರುದಾರರು ದಿನಾಂಕ: 23/10/2020ರಂದು ಮೂಲ ದಾವಾ ಸಂಖ್ಯೆ: 521/2015ರ ವಾದ ಪತ್ರ ಮತ್ತು ಪ್ರತಿವಾದ ಪತ್ರದ ಪ್ರತಿಯನ್ನು ಹಾಗೂ ಆರ್ಡರ್ ಶೀಟ್‌ನ ಪ್ರತಿಗಳನ್ನು ಹಾಜರು ಮಾಡಿರುತ್ತಾರೆ. ಆದರೆ ಸದರಿ ದಾವೆಯಲ್ಲಿ ಯಾವುದೇ ಮಧ್ಯಂತರ ಆದೇಶವಾಗಿರುವುದು ಕಂಡುಬಂದಿರುವುದಿಲ್ಲ.

8. ಈ ಪ್ರಕರಣದಲ್ಲಿ ಅಪರ ಪೋಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತರವರು ತನಿಖಾ ವರದಿಯ ಆಧಾರದ ಮೇಲೆ ಗೌರವಾನ್ವಿತ

ಉಪಲೋಕಾಯುಕ್ತರವರ ದಿನಾಂಕ: 30/06/2020ರ ಆದೇಶದಂತೆ ಸ್ವಯಂ ಪ್ರೇರಿತ ದೂರನ್ನು ಎದುರುದಾರರ ವಿರುದ್ದ ದಾಖಲು ಮಾಡಿದ್ದು, ತನಿಖಾ ವರದಿಯ ಪ್ರಕಾರ ದೇವನಹಳ್ಳಿ ತಾಲ್ಲೂಕು ವಿಜಯಪುರ ಪುರಸಭೆಯ ವ್ಯಾಪ್ತಿಯಲ್ಲಿ ಶ್ರೀ.ರಘು ಬಿನ್ ಚನ್ನಪ್ಪರವರು ವಾರ್ಡ್ ನಂ. 8, ಸಂಗಮೇಶ್ವರ ಸಿನಿಮಾ ಥಿಯೇಟರ್‌ನ ಹಿಂಭಾಗದ ರಸ್ತೆಯಲ್ಲಿರುವ ಆಸ್ತಿ ಸಂಖ್ಯೆ: 480/203/354 ಮತ್ತು 481/1/204/354/1ರಲ್ಲಿ ಒಟ್ಟು ವಿಸ್ತೀರ್ಣ 19+32/2X32 ಮತ್ತು 20X21 ಖಾಲಿನಿವೇಶನಗಳಿಗೆ ಮಾಲೀಕರಾಗಿರುತ್ತಾರೆ. ಇವರು ಪುರಸಭೆಯಿಂದ ಪರವಾನಿಗೆಯನ್ನು ಪಡೆಯದೆ ಜಿ+2 ವಾಣಿಜ್ಯ ಕಟ್ಟಡವನ್ನು ನಿರ್ಮಿಸಲು ಪ್ರಾರಂಭಿಸಿದಾಗ ಈ ಕಟ್ಟಡಕ್ಕೆ ಸಂಬಂಧಿಸಿದಂತೆ ದಿನಾಂಕ: 15/06/2015ರಂದು ಪುರಸಭೆಯ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಶ್ರೀ.ರಘುರವರಿಗೆ ನೋಟೀಸ್ ಜಾರಿ ಮಾಡಿರುತ್ತಾರೆ. ನೋಟೀಸ್ ಜಾರಿಯಾದ ನಂತರ ದಿನಾಂಕ: 17/07/2015ರಂದು ವಾಸಿಸುವ ಮನೆಯನ್ನು ಕಟ್ಟಲು ಪರವಾನಿಗೆ ನಕ್ಷೆ ಮತ್ತು ಇತರೆ ಪೂರಕ ದಾಖಲೆಗಳೊಂದಿಗೆ ಅರ್ಜಿಯನ್ನು ಪುರಸಭೆಯ ಕಛೇರಿಯಲ್ಲಿ ಸ್ವೀಕರಿಸಿರುವುದು ತನಿಖಾ ಕಾಲದಲ್ಲಿ ಕಂಡುಬಂದಿರುತ್ತದೆ. ನಂತರ ಅನಧಿಕೃತ ಕಟ್ಟಡ ಅಂದರೆ ಸದರಿ ಜಾಗದಲ್ಲಿ ಅಂಗಡಿ ಮಳಿಗೆಗಳನ್ನು ಕಟ್ಟುತ್ತಿದ್ದು, ಸದರಿ ನಿರ್ಮಾಣವನ್ನು ನಿಲ್ಲಿಸುವಂತೆ ಹಾಗೂ ಮಳಿಗೆಗಳ ನಕ್ಷೆಯನ್ನು ಕಛೇರಿಗೆ ಸಲ್ಲಿಸುವಂತೆ ನಿವೇಶನದ ಮಾಲೀಕರಿಗೆ ದಿನಾಂಕ: 21/07/2015ರಂದು ನೋಟೀಸ್ ಜಾರಿ ಮಾಡಲಾಗಿರುತ್ತದೆ. ನಂತರ ನಿವೇಶನದ ಮಾಲೀಕರಾದ ಶ್ರೀ. ರಘುರವರು ದಿನಾಂಕ: 10/08/2015ರಂದು ನಕ್ಷೆ ಮತ್ತು ದಾಖಲಾತಿಗಳನ್ನು ಒದಗಿಸಲು 15 ದಿನಗಳ ಕಾಲಾವಕಾಶವನ್ನು ಕೋರಿ ಅರ್ಜಿಯನ್ನು ಪುರಸಭೆಯ ಕಛೇರಿಗೆ ಸಲ್ಲಿಸಿರುತ್ತಾರೆ. ನಂತರ ಪುರಸಭೆಯಿಂದ ಪರವಾನಿಗೆಯನ್ನು ಪಡೆಯದೆ ಶ್ರೀ. ರಘುರವರು ಪುರಸಭೆಯ ಸೂಚನೆಯನ್ನು

ಉಲ್ಲಂಘನೆ ಮಾಡಿ ಅನಧಿಕೃತವಾಗಿ ಕಟ್ಟಡವನ್ನು ನಿರ್ಮಿಸಿರುವುದು ತನಿಖೆಯಿಂದ ಕಂಡುಬಂದಿರುತ್ತದೆ. ಪುರಸಭೆಯ ಅಧಿಕಾರಿಗಳು ನೀಡಿದ ನೋಟೀಸ್‌ಗಳನ್ನು ಪರಿಗಣಿಸದೆ ನಿರ್ಮಿಸಿರುವ ಅನಧಿಕೃತ ಕಟ್ಟಡವನ್ನು ಸರ್ಕಾರದ ನಿಯಮಾವಳಿಯಂತೆ ಸಕ್ರಮಗೊಳ್ಳುವವರೆಗೆ ಪುರಸಭೆ ಕಾಯ್ದೆ 1864 ಕಲಂ. 107ರಂತೆ 2 ಪಟ್ಟು ಆಸ್ತಿ ತೆರಿಗೆಯನ್ನು ಪ್ರತಿವರ್ಷ ದಂಡದ ರೂಪದಲ್ಲಿ ಪುರಸಭೆಗೆ ಪಾವತಿಸಬೇಕಾಗಿರುತ್ತದೆ. ನಂತರ ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ಸದರಿ ಅನಧಿಕೃತ ಕಟ್ಟಡವನ್ನು ಸಕ್ರಮಗೊಳಿಸಲು ಅವಕಾಶವಿರುತ್ತದೆ ಎಂದು ಪುರಸಭೆಯ ಮುಖ್ಯಾಧಿಕಾರಿ ತಮ್ಮ ಪತ್ರದಲ್ಲಿ ತನಿಖಾಧಿಕಾರಿಯವರಿಗೆ ತಿಳಿಸಿರುತ್ತಾರೆ.

9. ಆದರೆ ಪುರಸಭೆಯ ಅಧಿಕಾರಿಗಳು ದಿನಾಂಕ: 21/07/2015ರ ನೋಟೀಸ್ ನಂತರ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಕಟ್ಟಡ ಕಟ್ಟುವ ಕೆಲಸ ಮುಕ್ತಾಯಗೊಂಡ ನಂತರ ದಿನಾಂಕ: 06/08/2016ರಲ್ಲಿ ಯಾವುದೇ ನೋಟೀಸ್ ನೀಡದೇ ಕಟ್ಟಡ ಮಾಲೀಕರಿಂದ ಒಮ್ಮೆ ದಂಡ ಕಟ್ಟಬೇಕು ಎಂದು ಮೌಖಿಕವಾಗಿ ಹೇಳಿ ಒಟ್ಟು ರೂ. 14,958/- ಹಣವನ್ನು ದಂಡ ಮತ್ತು ತೆರಿಗೆಯಾಗಿ ಪಾವತಿಸಿಕೊಂಡಿರುತ್ತಾರೆ. ನಂತರ ಪುರಸಭೆಯ ಕಂದಾಯ ಅಧಿಕಾರಿಗಳು ದಿನಾಂಕ: 08/05/2018ರಂದು ಕಟ್ಟಡದ ಮಾಲೀಕರಿಗೆ 2017-18 ಮತ್ತು 2018-19ನೇ ಸಾಲಿನ ತೆರಿಗೆ (ಎರಡು ಪಟ್ಟು) ಮತ್ತು ದಂಡ ಸೇರಿ ಒಟ್ಟು ರೂ. 11,031/- ಗಳನ್ನು 30 ದಿನಗಳೊಳಗಾಗಿ ಪಾವತಿಸುವಂತೆ ನೋಟೀಸ್ ಜಾರಿ ಮಾಡಿರುವುದು ತನಿಖೆಯಿಂದ ಕಂಡುಬಂದಿರುತ್ತದೆ.

10. ಆದರೆ ಎದುರುದಾರರು ಅಕ್ರಮವಾಗಿ ಕಟ್ಟಡ ಕಟ್ಟುತ್ತಿದ್ದರೂ, ಯಾವುದೇ ಕ್ರಮ ಕೈಗೊಳ್ಳದೇ ಅಕ್ರಮ ಕಟ್ಟಡ ಕಟ್ಟಲು ಸಹಕರಿಸಿರುತ್ತಾರೆ. ಆದ್ದರಿಂದ ಎದುರುದಾರರು ಕರ್ತವ್ಯ ನಿರ್ಲಕ್ಷತೆ ತೋರಿರುವುದು ಕಂಡು ಬಂದಿರುತ್ತದೆ. ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಮೂಲ ದಾವಾ ಸಂಖ್ಯೆ: 521/2015ರ ದಾವೆಯಲ್ಲಿ ಮಧ್ಯಂತರ ಸ್ಟೇ ಆದೇಶ ಇರುವುದರಿಂದ ಯಾವುದೇ ಕ್ರಮ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಆದರೆ ಎದುರುದಾರರು ಹಾಜರು ಮಾಡಿರುವ ದಾಖಲಾತಿಗಳಲ್ಲಿ ಯಾವುದೇ ಮಧ್ಯಂತರ ನಿರ್ಬಂಧಕ ಆಜ್ಞೆ ಕಂಡು ಬಂದಿರುವುದಿಲ್ಲ. ಎದುರುದಾರರು ತನ್ನ ಕರ್ತವ್ಯವನ್ನು ಸಮರ್ಪಕವಾಗಿ ನಿರ್ವಹಿಸದೆ ಕಟ್ಟಡದ ಮಾಲೀಕರಿಗೆ ಸದರಿ ಅಕ್ರಮ ಕಟ್ಟಡವನ್ನು ಕಟ್ಟಲು ಸಹಕಾರ ನೀಡಿರುವುದು ಕಂಡು ಬಂದಿರುತ್ತದೆ. ಸಿವಿಲ್ ನ್ಯಾಯಾಲಯದಿಂದ ಯಾವುದೇ ಪ್ರತಿಬಂಧಕ ಆಜ್ಞೆಯು ಇರದಿದ್ದರೂ ಸಹ ನ್ಯಾಯಾಲಯದ ಸ್ಟೇ ಆದೇಶ ಇರುವುದರಿಂದ ಯಾವುದೇ ಕ್ರಮ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ ಎಂದು ಸುಳ್ಳು ಆಕ್ಷೇಪಣೆಯನ್ನು ಸಲ್ಲಿಸಿ ಈ ಪ್ರಾಧಿಕಾರದ ದಾರಿ ತಪ್ಪಿಸಲು ಪ್ರಯತ್ನಿಸಿರುವುದು ಕಂಡುಬಂದಿರುತ್ತದೆ. ಎದುರುದಾರರು ಸದರಿ ಅಕ್ರಮ ಕಟ್ಟಡದ ಮಾಲೀಕರಿಗೆ ಕೇವಲ 2 ನೋಟೀಸ್‌ಗಳನ್ನು ನೀಡಿ ನಂತರ ಯಾವುದೇ ಕ್ರಮ ಜರುಗಿಸದೇ ಇರುವುದರಿಂದ ಕಟ್ಟಡ ಮಾಲೀಕರಾದ ಶ್ರೀ.ರಘುರವರು ಅಕ್ರಮ ಕಟ್ಟಡವನ್ನು ನಿರ್ಮಿಸಲು ಅವಕಾಶವಾಗಿರುತ್ತದೆ.

11. ಮೇಲಿನ ಕಾರಣಗಳಿಂದ ಎದುರುದಾರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1)(i) ರಿಂದ (iii) ರಲ್ಲಿ ಹೇಳಿದಂತೆ ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು

ಕಂಡುಬಂದದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಈ ಮೂಲಕ ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎರ ಅಡಿಯಲ್ಲಿ ಇಲಾಖಾ ವಿಚಾರಣೆ ಮಾಡಲು 'ಉಪಲೋಕಾಯುಕ್ತರಿಗೆ' ವಹಿಸುವಂತೆ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ. ಹಾಗೆಯೇ, ಎದುರುದಾರರು 31/07/2018ರಂದು ನಿವೃತ್ತಿ ಹೊಂದಿದ್ದು ಸದರಿಯವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಕರ್ನಾಟಕ ನಾಗರೀಕ ಸೇವಾ ನಿಯಮಗಳು ನಿಯಮ 214(2)(ಬಿ) ರನ್ವಯ ಅನುಮತಿಯನ್ನು ನೀಡಬೇಕೆಂದು ಕೋರಲಾಗಿದೆ.

12. ಮುಂದುವರೆದು, ಎದುರುದಾರರ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984, ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಈ ವರದಿ ಸ್ವೀಕೃತವಾದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ನಿರ್ದೇಶಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

25-11-20

**(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)**
**ಉಪಲೋಕಾಯುಕ್ತರು–2,**
23/11/20 **ಕರ್ನಾಟಕ ರಾಜ್ಯ.**